# ಈಗ ಖಾತೆಯನ್ನು ತೆರೆಯಬಹುದು!

ಇಂಗ್ಲಿಷ್ ಮೂಲ: **ಜೆಫ್ರಿ ಆರ್ಚರ್**
ಕನ್ನಡಕ್ಕೆ: **ಜೆ.ವಿ. ಕಾರ್ಲೊ**
ಕಲೆ: ಸಂತೋಷ್ ಸಸಿಹಿತ್ಲು

ಕಳೆದ ಹದಿನೇಳು ವರ್ಷಗಳಲ್ಲಿ ನೈಜೀರಿಯಾದ ಹದಿನೇಳನೇ ಹಣಕಾಸು ಮಂತ್ರಿಯನ್ನಾಗಿ ಇಗ್ನೇಶಿಯಸ್ ಅಗರ್ಬಿಯನ್ನು ಅಧ್ಯಕ್ಷರು ನೇಮಿಸಿದಾಗ ಯಾರೂ ಹುಬ್ಬೇರಿಸಲಿಲ್ಲ.

ಅಧಿಕಾರವನ್ನು ವಹಿಸಿಕೊಂಡ ದಿನ ಪತ್ರಿಕಾಗೋಷ್ಠಿಯಲ್ಲಿ, ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ, ಲಂಚ ನಿವಾರಿಸುವುದೇ ತನ್ನ ಮೊದಲ ಆದ್ಯತೆ ಎಂದು ಇಗ್ನೇಶಿಯಸ್ ಅಗರ್ಬಿ ಘೋಷಿಸಿದ. ಸರ್ಕಾರಿ ಅಧಿಕಾರಿಗಳು ಇನ್ನು ಮುಂದೆ ಹೆಚ್ಚು ಹೆಚ್ಚು ನಿಗಾವಹಿಸಬೇಕೆಂದು ಅವನು ಕಟುವಾಗಿ ಎಚ್ಚರಿಸಿದ. ಸರ್ಕಾರದಲ್ಲಿ ಭ್ರಷ್ಟಾಚಾರ ತೊಲಗಿಸುವವರೆಗೂ ತಾನು ಕಿಂಚಿತ್ತೂ ವಿಶ್ರಮಿಸುವುದಿಲ್ಲವೆಂದು ಶಪಥವನ್ನೂ ಮಾಡಿದ.

ಹೊಸ ಮಂತ್ರಿಗಳ ಭಾಷಣ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ, ಲಾಗೋಸಿನ (ನೈಜೀರಿಯದ ರಾಜಧಾನಿ) ಅತ್ಯಧಿಕ ಪ್ರಸಾರದ 'ಡೈಲಿ ಟೈಮ್ಸ್' ದಿನಪತ್ರಿಕೆಯಲ್ಲಿ ಅದರ ಉಲ್ಲೇಖವೇ ಆಗಲಿಲ್ಲ! ಕಳೆದ ಹದಿನಾರು ವರ್ಷಗಳಿಂದ ಈ ನಮೂನೆಯ ಭಾಷಣಗಳನ್ನು ಕೇಳಿ ಕೇಳಿ ಜನರೂ, ಪತ್ರಿಕೆಯವರೂ ರೋಸಿ ಹೋಗಿದ್ದರು. ಅದನ್ನೇ ಪ್ರತಿ ವರ್ಷ ಪುನರಾವರ್ತಿಸುವುದು ಬೇಡವೆಂದು ಸಂಪಾದಕರು ಆ ಹೇಳಿಕೆಗೆ ಮಹತ್ವವನ್ನೇ ಕೊಟ್ಟಿರಲಿಲ್ಲ!

ಇದರಿಂದ ಇಗ್ನೇಶಿಯಸ್ ಅಗರ್ಬಿಗೆ ನಿರಾಶೆಯಂತೂ ಆಗಲಿಲ್ಲ. ಅವನು ತಾನು ಘೋಷಿಸಿದಂತೆ, ಯಾರಿಗೂ ಕ್ಯಾರೆನ್ನದೆ ತಾನು ಎಲ್ಲರಂತಲ್ಲ ಎಂಬಂತೆ ದಿಟ್ಟ ನಿರ್ಧಾರ ಮತ್ತು ಹುರುಪಿನಿಂದ ತನ್ನ ಖಾತೆಯನ್ನು ಕೈಗೆತ್ತಿಕೊಂಡ. ಅವನು ಅಧಿಕಾರ ವಹಿಸಿಕೊಂಡಾದ ಅನಂತರ ವಾಣಿಜ್ಯ ಇಲಾಖೆಯ ಸಹಾಯಕ ಅಧಿಕಾರಿಯೊಬ್ಬ ಧಾನ್ಯಗಳ ಆಮದಿನಲ್ಲಿ ನಡೆದಿದ್ದ ಭ್ರಷ್ಟಾಚಾರದಲ್ಲಿ ಸಿಕ್ಕಿ ಬಿದ್ದು ಜೈಲುಪಾಲಾದ. ಅಗರ್ಬಿ ಬೀಸಿದ್ದ ಜಾಲಕ್ಕೆ ಸಿಕ್ಕಿ ಬಿದ್ದ ಮುಂದಿನ ಮಿಕ ಒಬ್ಬ ಲೆಬಾನೀಸ್ ಹಣ ಹೂಡಿಕೆದಾರ. ಅವನು ನೈಜೀರಿಯಾದ ವಿದೇಶಿ ವಿನಿಮಯ ಕಾನೂನನ್ನು ಉಲ್ಲಂಘಿಸಿದ್ದ. ದಯೆ ದಾಕ್ಷಿಣ್ಯವಿಲ್ಲದೆ ದೇಶದ ಕಾನೂನಿನ ಪ್ರಕಾರ ಅವನನ್ನು ಗಡಿಪಾರು ಮಾಡಲಾಯಿತು. ಇಗ್ನೇಶಿಯಸ್ ಅಗರ್ಬಿಯ ಮುಂದಿನ ಶಿಕಾರಿಯಾದವನು ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್. ಈವರೆಗೆ ನೈಜೀರಿಯಾದ ಜನರು ಲಂಚವೆಂದರೆ ಸರಕಾರಿ ಬಾಬುಗಳ ವಿಶೇಷ ಭತ್ಯೆ ಎಂದೇ ಭಾವಿಸಿದ್ದರು. ನಾಲ್ಕು ತಿಂಗಳ ಅನಂತರ ಇನ್‌ಸ್ಪೆಕ್ಟರ್ ಜನರಲ್ಲನಿಗೆ ಹದಿನೆಂಟು ತಿಂಗಳ ಜೈಲುವಾಸ ಶಿಕ್ಷೆಯಾದ ಬಳಿಕ 'ಡೈಲಿ ಟೈಮ್ಸ್' ಪತ್ರಿಕೆಗೆ ಇಗ್ನೇಶಿಯಸ್ ಅಗರ್ಬಿಯ ಕುರಿತು ಕನಿಷ್ಠ ನಾಲ್ಕಕ್ಷರ ಬರೆಯದೆ ಸುಮ್ಮನಿರಲು ಸಾಧ್ಯವಿರಲಿಲ್ಲ. 'ಡೈಲಿ ಟೈಮ್ಸ್'ನ ಒಂದು ಸಂಪಾದಕೀಯದಲ್ಲಿ

